## ಮಾತು-ಕತೆ

ನಾನು ಬದುಕುಳಿದೆನಲ್ಲ, ಬಹುಶಃ ಅದೇ ದೊಡ್ಡದು. ಜಾಗತಿಕ ಇತಿಹಾಸದಲ್ಲಿಯೇ ನಮ್ಮ ಶತಮಾನ ಭಯಾನಕವಾದದ್ದು. ಆದರೆ, ನಮ್ಮ ಬದುಕು ಹೆಚ್ಚು ಕಡಿಮೆ ಒಂದೇ ರೀತಿಯಿದೆ. ಖಾಸಗಿ ಬದುಕಿನ ಕುರಿತು ಹೇಳುತ್ತಿದ್ದೇನೆ. ಫ್ರೆಂಚ್ ಅಥವಾ ಅಮೆರಿಕನ್ ಕ್ರಾಂತಿ, ಪರ್ಷಿಯನ್ ಮತ್ತು ಗ್ರೀಕರ ನಡುವಿನ ಯುದ್ಧದ ಕಾಲ ಇರಬಹುದು. ಪ್ರಪಂಚದಲ್ಲಿ ಹೀಗೆ ಯಾವುದೇ ದೊಡ್ಡ ಘಟನೆ ನಡೆಯುವ ಸಮಯದಲ್ಲಿ ಇತಿಹಾಸ ನಿರಂತರವಾಗಿ ಬದಲಾಗುತ್ತಿರುತ್ತದೆ. ಆಗಲೂ ಜನ ಬದುಕುತ್ತ, ಕೆಲಸ ಮಾಡುತ್ತ, ಪ್ರೀತಿಸುತ್ತ, ರೋಗದಿಂದ ಬಳಲುತ್ತ, ಸಾಯುತ್ತಾರೆ. ಅವರಿಗೆ ಸ್ನೇಹಿತರಿರುತ್ತಾರೆ, ಅವರದೇ ಬದುಕಿನ ಖುಷಿ ಇಲ್ಲವೆ ದುಃಖದ ಗಳಿಗೆಗಳಿರುತ್ತವೆ. ಅದಕ್ಕೂ ಇತಿಹಾಸಕ್ಕೂ ಸಂಬಂಧವಿರುವುದಿಲ್ಲ ಅಥವಾ ಬಹಳ ಕಡಿಮೆ ಸಂಬಂಧವಿರುತ್ತದೆ. ಇತಿಹಾಸ ಎನ್ನುವುದೇ ಬೇರೆ, ನಮ್ಮ ಬದುಕೇ ಬೇರೆ.

◆ **ಅಂದರೆ, ಏಕಕಾಲಕ್ಕೆ ನಾವು ಇತಿಹಾಸದ ಒಳಗೂ ಹೊರಗೂ ಇರುತ್ತೇವೆಯೇ?**

ಹೌದು. ಇತಿಹಾಸ ನಾವಿರುವ ಪ್ರದೇಶ ಅಥವಾ ವ್ಯವಸ್ಥೆ. ಅದರಲ್ಲಿ ನಾವು ಬದುಕುತ್ತಿರುತ್ತೇವೆ. ನಿಜವಾದ ನಾಟಕ, ನಿಜವಾದ ತಮಾಷೆ ನಮ್ಮೊಳಗೆ ಇರುತ್ತದೆ. ಇದನ್ನೇ ಐದನೆಯ ಶತಮಾನದಲ್ಲಿದ್ದವರಿಗೂ ಹೇಳಬಹುದು ಇಲ್ಲವೇ ಭವಿಷ್ಯದ ಶತಮಾನದಲ್ಲಿರುವವರಿಗೂ ಅನ್ವಯಿಸಬಹುದು. ಬದುಕು ಐತಿಹಾಸಿಕವಲ್ಲ, ಅದೊಂದು ರೀತಿ ಪ್ರಕೃತಿ ಇದ್ದಂತೆ.

◆ **'ದ ಪ್ರಿವಿಲೇಜಸ್ ಆಫ್ ಸೈಟ್' ಪುಸ್ತಕದಲ್ಲಿ ಬಾಲ್ಯವನ್ನು ಕಳೆದ ಮಿಕ್ಸೋಕ್ ಬಗ್ಗೆ ಮತ್ತು ಇಪ್ಪತ್ತನೆಯ ಶತಮಾನದ ಮೆಕ್ಸಿಕೊ ಕುರಿತು ಬರೆದಿರುವಿರಿ.**

ಮಿಕ್ಸೋಕ್ ಈಗ ಮೆಕ್ಸಿಕೊ ನಗರದ ಕೊಳಕು ಉಪನಗರವಾಗಿದೆ. ನಾನು ಚಿಕ್ಕವನಾಗಿದ್ದಾಗ ಅದೊಂದು ಸಣ್ಣ ಹಳ್ಳಿಯಾಗಿತ್ತು. ಪೂರ್ವ ಕೊಲಂಬಿಯನ್ ಕಾಲಕ್ಕೆ ಸೇರಿದ ಪುರಾತನ ಹಳ್ಳಿ. ಮಿಕ್ಸ್‌ಕೋಟ್ಲ್ ಎಂಬ ದೇವರಿಂದ ಮಿಕ್ಸೋಕ್ ಹೆಸರು ಬಂದಿದೆ. ಇದು ಕ್ಷೀರಪಥಕ್ಕಿರುವ ನಹುಟಲ್ ಹೆಸರು. ಇದರರ್ಥ 'ಮೇಘ ಸರ್ಪ' – ಕ್ಷೀರಪಥವು ಮೋಡಗಳ ಸರ್ಪದಂತಿದೆ. ಅಲ್ಲೊಂದು ಸಣ್ಣ ಪಿರಮಿಡ್, 17ನೇ ಶತಮಾನದ ಕಾನ್ವೆಂಟ್ ಇತ್ತು. ನಮ್ಮ ಪಕ್ಕದ ಹಳ್ಳಿ ಸ್ಯಾನ್ ಜುವಾನ್. ಆ ಇಡೀ ಪ್ರದೇಶಕ್ಕೆ ಅತ್ಯಂತ ಹಳೆಯದಾದ 16ನೇ ಶತಮಾನಕ್ಕೆ ಸೇರಿದ ಪರಿಶ್ ಚರ್ಚೊಂದು ಅಲ್ಲಿತ್ತು. ಅಲ್ಲಿ 18–19ನೇ ಶತಮಾನಕ್ಕೆ ಸೇರಿದ ಹಲವಾರು ಮನೆಗಳು, ದೊಡ್ಡ ಉದ್ಯಾನಗಳು ಇದ್ದವು. 19ನೇ ಶತಮಾನದ ಕೊನೆಯಲ್ಲಿ ಮೆಕ್ಸಿಕನ್ ಮಧ್ಯಮ ವರ್ಗದ ಕುಟುಂಬಗಳಿಗೆ ಮಿಕ್ಸೋಕ್ ಬೇಸಿಗೆಯ ರೆಸಾರ್ಟ್‌ನಂತಿತ್ತು. ನಮ್ಮ ಮನೆಯವರಿಗೂ ಅಲ್ಲೊಂದು ಬೇಸಿಗೆ ಮನೆ ಇತ್ತು. ಕ್ರಾಂತಿ ಶುರುವಾದಾಗ ಅಲ್ಲಿಗೆ ಖುಷಿಯಿಂದಲೇ ಹೋಗಿ ಇದ್ದೆವು. ಜೀವಂತವಾಗಿದ್ದ ಪೂರ್ವ ಕೊಲಂಬಿಯನ್ ಮತ್ತು ವಸಾಹತುಶಾಹಿ, ಹೀಗೆ ಎರಡು ಗತಗಳ ನೆನಪು ನಮ್ಮನ್ನು ಆವರಿಸಿತ್ತು. ಮಿಕ್ಸೋಕ್‌ನಲ್ಲಿ ಮಿಡಿಯುವ ಜೀವಂತಿಕೆಯಿತ್ತು. ಅಂತಹ ಜೀವಂತಿಕೆ ಈಗ ದೊಡ್ಡ ನಗರಗಳಲ್ಲಿ ಇಲ್ಲ.

◆ **ಪಾಜ್ ಮನೆತನದ ಬಗ್ಗೆ ಸ್ವಲ್ಪ ತಿಳಿಸುವಿರಾ?**

ನಮ್ಮ ತಂದೆ ಮೆಕ್ಸಿಕನ್, ತಾಯಿ ಸ್ಪ್ಯಾನಿಷ್. ಚಿಕ್ಕಮ್ಮ ನಮ್ಮೊಂದಿಗೆ ಇದ್ದರು. ಅವಳದು ವಿಲಕ್ಷಣ ಕಾವ್ಯಾತ್ಮಕ ವ್ಯಕ್ತಿತ್ವ. ನಮ್ಮ ತಾತ ಲಾಯರ್ ಹಾಗೂ ಜನಪ್ರಿಯ ಕಾದಂಬರಿಕಾರ. ಒಂದು ಹಂತದಲ್ಲಿ ಅವರ ಜನಪ್ರಿಯ ಪುಸ್ತಕವೊಂದರ ಮಾರಾಟದಿಂದ ಬಂದ ಹಣದಿಂದಲೇ ನಾವು ಜೀವನ ಸಾಗಿಸಿದ್ದೆವು. ಮಿಕ್ಸೋಕ್‌ನ ಮನೆ ತಾತನಿಗೆ ಸೇರಿದ್ದು.